ಕಡೂರು ಡಿಸ್ಟ್ರಿಕ್ಟ್.

ಅಬಸ್ಟ್ರಾಕ್ಟ್ ಇನ್ಸ್ತಿಹಾರ್.

ತಾರೀಖು 15ನೆ ಫೆಬ್ರವರಿ 1907.

ಯಡೆಹಳ್ಳಿ ಸಬ್ ತಾಲ್ಲೂಕಿನಲ್ಲಿ ಜವಿನಾನುದಾರರಾಗಿದ್ದ Mr. T. W. ಡಾರ್ಲಿಂಗ್ ಸಾಹೇಬರು ಮತ್ತು Mrs. J. D. ಡಾರ್ಲಿಂಗ್ ಬೀಬಿ ಸಾಹೇಬರವರಿಂದ ನೇರ್ಲೆಕೊಪ್ಪ ಮತ್ತು ಬಡಗಬೈಲು ಗ್ರಾಮಗಳಿಗೆ ಬರಬೇಕಾದ ಕಂದಾಯು ಬಾಕೀಗಾಗಿ ಇವರಿಗೆ ಸೇರಿದ ಸ್ಥಿರಾಸ್ತಿಯನ್ನು ಕಡೂರು ಡಿಸ್ಟ್ರಿಕ್ಟ್ ಯಡೆಹಳ್ಳಿ ಸಬ್ ತಾಲ್ಲೂಕು ಕಛೇರಿ ರೂಬರೂಬು ಡೆಪ್ಯುಟಿ ಅಮಲ್ದಾರ್ರಿಂದ 29—4—1907ರಲ್ಲಿ ಹರಾಜು ಮಾಡಲ್ಪಡುತ್ತಂತ ಇದರಿಂದ ಪ್ರಸಿದ್ಧಪಡಿಸಿದೆ.

ಹೆಚ್ಚಿನ ತಪಶೀಲುಗಳಿಗೆ 1907ನೆ ಇಸವಿ ಫೆಬ್ರವರಿ 28ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 63—64ನೆ ಪೇಜುಗಳನ್ನು ನೋಡಬೇಕು.

ಎಂ. ಲಕ್ಷ್ಮಣಸ್ವಾಮಿ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

1903–04ನೆ ಇಸವಿ ದಿವಾಳಿ ಕೇಸ್ ನಂಬರು 111.

ದಿವಾಳಿಯಾದ ಡಿಕ್ರಿ ದೇಣೇದಾರರು 1ನೆ ಅಹವ್ಮದ್ದಲ್ಲಿ, 2ನೆ ಮಹವ್ಮದವೊಕದಂಸಾಬರ ವಿಷಯದಲ್ಲಿ.

ಸ್ರ 1903–04ನೆ ಇಸವಿ ದಿವಾಳಿ ವ್ಯಾಜ್ಯದ ನಂಬರು 111.

ಹುಕ್ಕುಂ.

ಮೇಲ್ಕಂಡ ಅಹವ್ಮದ್ದಲ್ಲಿ-ಮಹವ್ಮದವೊಕದಂಸಾಬರು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜಿದಾರರ ಪರವಾಗಿ ಹಾಜರಾದ ಅಡ್ವೋಕೇಟ್ ಮಿ॥ ಎಂ. ಎಲ್. ನರಸುಬ್ಬಯ್ಯಂಗಾರರ ಸಮಕ್ಷಮದಲ್ಲಿಯೂ ಮತ್ತು ಐಜ್ ಅರ್ಜಿದಾರರ ಲೇಣೇದಾರರಾದ 1—4 ಮತ್ತು 2ನೆ ಯವರ ತರಫು ಮಿ॥ ಅಡ್ವೋಕೇಟ್ ಎಂ. ಎ. ಕೃಷ್ಣಯ್ಯಂಗಾರ್ರು, ಅಡ್ವೋಕೇಟ್ ಮಿ॥ ಎಂ. ಸಿ. ರಂಗೈಯ್ಯಂಗಾರ್ರು ಮತ್ತು 1ನೆ ಗ್ರೇಡ್ ಪ್ಲೀಡರ್ ಮಿ॥ ಎಸ್. ನಾರಾಯಣರಾಯರು ಮತ್ತು 3 ಮತ್ತು 5ರ ಲಾಗಾಯಿತು 35ರ ವರಿಗಿನ ಎದುರು ಅರ್ಜಿದಾರ್ರು ಗೈರ್ ಹಾಜರು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರರಿಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ತಾನೆ ಖುದ್ದಾಗಿಯಾಗಲಿ, ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವುದಕ್ಕೆ ತಪ್ಸಿಹೋದರು ಯಾರಂದರೆ—3 ಮತ್ತು 5ರ ಲಾಗಾಯಿತು 35ರ ವರಿಗಿನ ಎದುರು ಅರ್ಜಿದಾರ್ರುಗಳು ಸದರೀ ಅರ್ಜಿದಾರ್ರು 1ನೆ ಮಹವ್ಮದಅಲ್ಲಿ–2ನೆ ಮಹವ್ಮದವೊಕದಂಸಾಬರು ದಿವಾಳಿಯಾದವರೆಂದುನ್ನು ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ದಾರರಾಗಿರುತ್ತಾರೆಂದು ಇದರಿಂದ ತೀರ್ಮಾನಿಸಲ್ಪಟ್ಟು ಇರುತ್ತದೆ. ಈ ಕೋರ್ಟು ಸಿರಸ್ತೆದಾರ್ರು ಮತ್ತು ನಾಜರು ಎಂ. ಸಿ. ಸುಬ್ರಾಯರು ಇನ್ನು ಮುಂದೆ ನಮೂದಾದಂತೆ ಜಾವಿನಾನು ಕೆಟ್ಟಕೂಜೆ ಐಜ್ ದಿವಾಳಿಯಾದವರ ಜೆಂದಗಿಗೆ ರಿಸೀವರಾಗಿ ಮೊಕರರ್ರಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವರು ಪಡನೆ ದಿವಾಳಿಯಾದವರ ಜೆಂದಗಿಗೆ ಜವಾಬ್ ಮಾಡತಕ್ಕ ಬಗ್ಯೋ ನಿಗೇವಾನಿ ಮಾಡತಕ್ಕ ಬಗ್ಯೋ ಸಹ ಕೋರ್ಟಿನವರಿಂದ ಮಂಜೂರ್ರಾಡಬಹುದಾದಂಥಾ ಇಬ್ಬರು ಅಥವಾ ಹೆಚ್ಚು ಸಂಖ್ಯಾತವಾದ ಲಾಯಕ್ ಜಾರ್ಮಿದಾರರೊಡನೆ ಸಾಕಾದಷ್ಟು ಈಡಿನಿಂದ ಪತ್ರನನ್ನ ಬರದುಕೊಟ್ಟು ತನ್ನ ರಿಸೀವರ ಕೆಲಸಗಳಿಗೆ ಉದ್ಯುಕ್ತ ಪಡತಕ್ಕದ್ದೆಂದುನ್ನು ಮತ್ತು ಸದರಿ ರಿಸೀವರರು ತಾವು ನಡಸಿದ ಕೆಲಸಗಳ ಪ್ರತಿಫಲಕ್ಕಾಗಿ ದಿವಾಳಿಯಾದವರ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕಿ ಹಣದಲ್ಲಿ ದರ ಸೇಕಡ (5) ಐದು ರೂಪಾಯಿ ಮೇರೆ ಕಮ್ಮಿಷನ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನು ಸಹ ಹುಕ್ಕುಂ ಮಾಡಲ್ಪಟ್ಟು ಇದೆ.

ಸ್ರ 1907ನೆ ಇಸವಿ ಮಾರ್ಚಿ ನೆ ತಾರೀಖಿನಲ್ಲಿ ಕೋರ್ಟು ಮೊಹರ್ ಸಮ್ಮುಖ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಎಸ್. ವೆಂಕಟವರದ್ದ ಅಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಕೊಲ್ಲೇಗಾಲ ಪೇಟೆ ಡಿವಿಜ್.

ಇನ್ಸ್ತಿಹಾರ್ನಾಮೆ.

ಕೊಲ್ಲೇಪೇಟೆ, ತಾರೀಖು 27ನೆ ಫೆಬ್ರವರಿ 1907.

ಬೆಂಗಳೂರು ಡಿಸ್ಟ್ರಿಕ್ಟ್ ಕೊಲ್ಲೇಪೇಟೆ ಸಬ್ ಡಿವಿಜ್ ಸಾಹೇಬರವರ ಆಫೀಸಿನಿಂದ—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಸಬ್ ಡಿವಿಜ್ ಮಜಕೂರು ಬಾಬತು ಜೋಡಿ, ಕಾಯಂಗುತ್ತ ಇನಾಂ ಸರ್ವಮಾನ್ಯ ವಗೈರೆ ಗ್ರಾಮಗಳ ಬಾಬತು ಆಯಾಯ ಇನಾಂದಾರರಿಗೆ ಸಲ್ಲತಕ್ಕ ಟಾಡಿ ಹುಟ್ಟುವಳಿ ಹಕೀಯತ್ತನ್ನ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ವಿಚಾರಣೆ ಮಾಡಲ್ಪಡುತ್ತೆ. ಆಯಾಯ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಸಾಕ್ಷ್ಯ ಮತ್ತು ತಮ್ಮಲ್ಲಿರತಕ್ಕ

ದಾಖಲಾತಿಗಳೊಡನೆ ಕೋರ್ಟಿಗೆ ಮೊಕ್ತಂಗೆ ದಿವಿ 11 ಘಂಟೆಗೆ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸುವೇರೆ ಕ್ರಮ ಜರಗಿಸಲ್ಪಡುತ್ತೆ. ನಂತರ ಬರುವ ಯಾವ ತಕರಾರನ್ನು ಅಂಗೀಕರಿಸಲು ಆಗಲಾರದು ತಿಳಿಯುವದು.:—

ತಾಲ್ಲೂಕು.	ಗ್ರಾಮ.	ಹಿಯರಿಂಗ್ ತಾರೀಖು.	ಇನಾಂದಾರ್ರ ಹೆಸರು.
ಕಾನಕಾನಹಳ್ಳಿ ...	ಜೋಡಿ ಬಾಚಹಳ್ಳಿ ...	1907ನೆ ಏಪ್ರಿಲ್ 1 ...	ಬಿಂದುಮಾಧವಾಚಾರ್ರು ಮತ್ತು ಲಕ್ಷ್ಮಣಾಚಾರ್ರು.
ಡಿಟೋ ...	ಮರಳಿಬೇಕುಪ್ಪ ...	ಡಿಟೋ ...	ಗುರುಬಸಮ್ಮ, ಸಿದ್ದಲಿಂಗಪ್ಪ ವಜಂಟಿ
ಡಿಟೋ ...	ಕಾಯುಂಗುತ್ತಾ ನೆಲಗುಳಿ ...	ಡಿಟೋ ...	ಗೌಡವೀರಭದ್ರಪ್ಪ.
ಕೊಣ್ಣೇಟಿ ...	ತಾಳವಾಡಿ ...	1907ನೆ ಏಪ್ರಿಲ್ 2 ...	ಮೆ|| ಬಿ. ಚನ್ನರಾಜೆ ಅರಸ್.
ಡಿಟೋ ...	ಕೊಡಿಯಾಲಕಟೇನಹಳ್ಳಿ ...	ಡಿಟೋ ...	ವೆಂಕಟಸುಬ್ಬಯ್ಯ ಮತ್ತು ಇತರರು ವಜಂಟಿ.
ಡಿಟೋ ...	ಉರಗಹಳ್ಳಿ ...	ಡಿಟೋ ...	ಮೆ|| ಎಸ್. ನರಸುಂಹೈಯ್ಯಂಗಾರ್ ರಿಟೈರ್ಡ್ ಸಬ್ ಡಿವಿಜ಼ನ್ ಆಫಿಸರ್.
ಚನ್ನಪಟ್ಟಣ ...	ಜೋಡಿ ಡವಾಣಗುಂಡು ...	1907ನೆ ಏಪ್ರಿಲ್ 3 ...	,, ಕೆ. ವಿ. ಕೋದಂಡರಾಮು ಅಯ್ಯರ್.
ನೂಗಡಿ ...	ಜೋಡಿ ಹುಲುವೇನಹಳ್ಳಿ ...	ಡಿಟೋ ...	ಚಂದ್ರಶೇಖರಶಾಸ್ತ್ರಿ.
ಡಿಟೋ ...	ಕುರುಬರಹಳ್ಳಿ ...	ಡಿಟೋ ...	ಮೆ|| ವೇದಾಂತ ಐಯ್ಯಂಗಾರ್.
ಡಿಟೋ ...	ಜೋಡಿ ದಂಜೇನಹಳ್ಳಿ ...	1907ನೆ ಏಪ್ರಿಲ್ 4	,, ಕರಣೀಕ ಕೃಷ್ಣಮೂರ್ತಿರಾವ್.
ಡಿಟೋ ...	ಬಸವಾಪಟ್ಟಣ ...	ಡಿಟೋ ...	ರಾಮಸ್ವಾಮಿಶಾಸ್ತ್ರಿ, ಸುಬ್ಬಮ್ಮ ಮತ್ತು ಇತರರು.

ಸಿ. ದೇವರಾಜ ಅರಸ್,
ಸಬ್ ಡಿವಿಜ಼ನ್ ಆಫಿಸರ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1906—07ನೆ ಇಸವಿ ಮಿಸ್ ಅರ್ಜೀ ನಂಬರು 540.

ಅರ್ಜೀದಾರ್ ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷ್ ಜಾಗ್‌ಪಾಳ್ಯದಲ್ಲಿರುವ ಕಂಸರಿಯೇಟ್ ಕಂಟ್ರಾಕ್ಟರ್ K. ಸುಬ್ಬಯ್ಯ ಮೈನರಾದ ಸದರೀ ಜಾಗ್ ಪಾಳ್ಯದ ಸ್ಥಳದ ಅಪ್ಪಾಜಪ್ಪನ ಮಗ ನಾರಾಯಣನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ನಾರಾಯಣನಿಗೆ ಸೋದರರಾವ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷ್ ಜಾಗ್ ಪಾಳ್ಯದಲ್ಲಿರುವ ಕಂಸರಿಯೇಟ್ ಕಂಟ್ರಾಕ್ಟರ್ K. ಸುಬ್ಬಯ್ಯನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಯ 1907ನೆ ಇಸವಿ ಮಾರ್ಚಿ ತಾರೀಖು 22ನೆ ಶುಕ್ರವಾರದಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡಲಾಗಿಧೆ.

ಸ್ಯ 1907ನೆ ಇಸವಿ ಮಾರ್ಚಿ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಜೆ. ಎಚ್. ಭಾಭಾ,
ಸಬ್ ಜಡ್ಜ್.

ನೋಟಿಫಿಕೇಷ್ನ್ ನಂಬರ್ 276, ತಾರೀಖು 4ನೆ ಮಾರ್ಚಿ 1907.

ಈ ಕೆಳಗೆ ನಮೂದಿಸಿರುವ ಕೋ ಆಪರೇಟೀವ್ ಸೊಸೈಟಿಯು 1905ನೆ ಇಸವಿಯ ಮೈಸೂರು ಕೋ ಆಪರೇಟೀವ್ ಸೊಸೈಟಿಗಳ ರೆಗ್ಯುಲೇಷ್ನ್ 6ನೆ ಸೆಕ್ಷನ್, (2)ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿರುತ್ತೆ.

ಹೆಸರು.	ಸ್ಥಳ.	ರಿಜಿಸ್ಟರ್ ಆದ ತಾರೀಖು.
ತುಮಕೂರು ಸೆಂಟ್ರಲ್ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್ ತುಮಕೂರು.	ತುಮಕೂರು ...	ಫೆಬ್ರವರಿ 21, 1907.

ಎಂ. ಶ್ಯಾಮರಾವ್,
ರಿಜಿಸ್ಟ್ರಾರ್, ಕೋ ಆಪರೇಟೀವ್ ಸೊಸೈಟೀಸ್, ಇನ್ ಮೈಸೂರು.